## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ131ಟಿಪಿಇ2014, ದಿನಾಂಕ:20.08.2014.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 60 ಟಿಪಿಇ 2012, ದಿನಾಂಕ:07.11.2014.
3. ಸರ್ಕಾರದ ಆದೇಶ ಸಂಖ್ಯೆ:ಇಡಿ 72 ಟಿಪಿಇ 2019 ದಿನಾಂಕ:12.03.2020.
4. ಸರ್ಕಾರದ ಆದೇಶ ಸಂಖ್ಯೆ:ಇಡಿ 71 ಟಿಪಿಇ 2019, ದಿನಾಂಕ:22.04.2020.
5. ಸರ್ಕಾರದ ಆದೇಶ ಸಂಖ್ಯೆ:ಇಡಿ 61 ಟಿಪಿಇ 2020, ದಿನಾಂಕ:30.06.2020.
6. ಆಯುಕ್ತಾಲಯದ ಕಡತ ಸಂಖ್ಯೆ:DTE-PLAN0DVP2/42/2023(1202521)
7. ಆಯುಕ್ತಾಲಯದ ಕಡತ ಸಂಖ್ಯೆ:DTEPLAN0DVP2/42/2023,P-1(1359699)

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಶಿಕ್ಷಣ ಸಂಸ್ಥೆಗಳಿಗೆ ಮತೀಯ/ಭಾಷ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡುವ/ನವೀಕರಿಸುವ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ನಿಯಮ-4, ಉಪ ನಿಯಮ(5)ರನ್ವಯ ಸಂಸ್ಥೆಗಳ ಆಡಳಿತ ಮಂಡಳಿಯು ಮೂರನೇ ಎರಡು ಭಾಗದಷ್ಟು ಸಂಬಂಧಪಟ್ಟ ಸಮುದಾಯದ ಅಲ್ಪಸಂಖ್ಯಾತ ಟ್ರಸ್ಟಿಗಳನ್ನು ಹೊಂದಿದ್ದಲ್ಲಿ ಮತ್ತು ಉಪ ನಿಯಮ(6)ರನ್ವಯ ಆಡಳಿತ ಮಂಡಳಿಯ ಕೋಟದ ಪ್ರವೇಶಾತಿಯಲ್ಲಿ ಶೇ.50 ರಷ್ಟು ವಿದ್ಯಾರ್ಥಿಗಳು ಸಂಬಂಧಪಟ್ಟ ಅಲ್ಪಸಂಖ್ಯಾತ ಸಮುದಾಯಕ್ಕೆ ಹಾಗೂ ಇದರಲ್ಲಿ ಶೇ.75 ವಿದ್ಯಾರ್ಥಿಗಳು ಕರ್ನಾಟಕದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುವ ಷರತ್ತುಗಳನ್ನು ಪೂರೈಸಿದಲ್ಲಿ, ಅಂತಹ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಬಹುದಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಅಲ್ಪಸಂಖ್ಯಾತ ಅನುದಾನಿತ ಸಂಸ್ಥೆಗಳ ಅನುದಾನಿತ ಕೋರ್ಸುಗಳಲ್ಲಿನ ಮಂಜೂರಾದ ಒಟ್ಟು ವಿದ್ಯಾರ್ಥಿ ಪ್ರಮಾಣದಲ್ಲಿ ಶೇ. 50ರಷ್ಟು ಸೀಟುಗಳನ್ನು ಸರ್ಕಾರಿ ಸೀಟುಗಳನ್ನಾಗಿ ಹಾಗೂ ಉಳಿದ ಶೇ. 50ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ಸೀಟುಗಳನ್ನಾಗಿ ಮತ್ತು ಸದರಿ ಶೇ. 50ರಷ್ಟು ಆಡಳಿತ ಮಂಡಳಿಯ ಸೀಟುಗಳ ಪೈಕಿ ಶೇ. 66ರಷ್ಟು ಸೀಟುಗಳನ್ನು ಅಲ್ಪಸಂಖ್ಯಾತ/ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದಲೇ ಪ್ರವೇಶಾತಿ ಮಾಡಿಕೊಳ್ಳುವಂತೆ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಆದೇಶದಲ್ಲಿ ಕೆ.ಸಿ.ಟಿ ಪಾಲಿಟೆಕ್ನಿಕ್ (ಅನುದಾನಿತ), ಕಲಬುರ್ಗಿ ಈ ಸಂಸ್ಥೆಗೆ 2019-20ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಆದೇಶದಲ್ಲಿ ಟಿಪ್ಪು ಶಹೀದ ಪಾಲಿಟೆಕ್ನಿಕ್ (ಅನುದಾನಿತ), ಹುಬ್ಬಳ್ಳಿ ಈ ಸಂಸ್ಥೆಗೆ 2019-20ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಆದೇಶದಲ್ಲಿ ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್ (ಅನುದಾನಿತ), ಗದಗ್ ಈ ಸಂಸ್ಥೆಗೆ 2020-21ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (6) &(7) ರ ಆಯುಕ್ತಾಲಯದ ಏಕಕಡತಗಳ ಪ್ರಸ್ತಾವನೆಯಲ್ಲಿ, 1)ಕೆ.ಸಿ.ಟಿ ಪಾಲಿಟೆಕ್ನಿಕ್, ಕಲಬುರ್ಗಿ, 2) ಟಿಪ್ಪು ಶಹೀದ ಪಾಲಿಟೆಕ್ನಿಕ್, ಹುಬ್ಬಳ್ಳಿ ಮತ್ತು 3) ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್, ಗದಗ್ ಈ ಮೂರು ಅನುದಾನಿತ ಪಾಲಿಟೆಕ್ನಿಕ್‌ಗಳು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 131 ಟಿಪಿಇ 2014, ದಿನಾಂಕ:20.08.2014ರಲ್ಲಿ ನಿಗದಿಪಡಿಸಿರುವಂತೆ ನಿಯಮ 4, ಉಪ

ನಿಯಮ(5)ರನ್ವಯ ಸದರಿ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಮೂರನೇ ಎರಡು ಭಾಗದಷ್ಟು ಸಂಬಂಧಪಟ್ಟ ಸಮುದಾಯದ ಅಲ್ಪಸಂಖ್ಯಾತ ಟ್ರಸ್ಟಿಗಳನ್ನು ಹೊಂದಿರುತ್ತವೆ ಎಂದು ಹಾಗೂ 2021-22ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಆಗಿರುವ ವಿದ್ಯಾರ್ಥಿ ಪ್ರವೇಶಾತಿಯ ವಿವರಗಳನ್ನು ಸಲ್ಲಿಸುತ್ತಾ, ಪ್ರಸ್ತಾವನೆಗೆ ಅನುಮೋದನೆ ಕೋರಿರುತ್ತಾರೆ.

ಸದರಿ ಪಾಲಿಟೆಕ್ನಿಕ್‌ಗಳಲ್ಲಿ 2021-22ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಆಗಿರುವ ವಿದ್ಯಾರ್ಥಿ ಪ್ರವೇಶಾತಿಯ ವಿವರಗಳನ್ನು ಪರಿಶೀಲಿಸಲಾಗಿ, ಸದರಿ ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆಗಳು ಶೇ.100 ರಷ್ಟು ವೇತನಾನುದಾನ ಪಡೆಯಲು ಸಂಸ್ಥೆಯ ಆಡಳಿತ ಮಂಡಳಿಯ ಕೋಟಾದ ಶೇ. 50 ರಷ್ಟು ಸೀಟುಗಳನ್ನು ಸರ್ಕಾರಕ್ಕೆ ಅಧ್ಯರ್ಪಣೆ (surrender) ಮಾಡಿದ್ದು, ಸರ್ಕಾರದ ಶೇ.50 ರಷ್ಟು ಸೀಟುಗಳು ಸೇರಿದಂತೆ, ಶೇ.100ರಷ್ಟು ಸೀಟುಗಳನ್ನು ನಿಯಮಾನುಸಾರ ಭರ್ತಿ ಮಾಡಲಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 100 ಟಿಪಿಇ 2023**
**ಬೆಂಗಳೂರು, ದಿನಾಂಕ:09ನೇ ಆಗಸ್ಟ್, 2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 1)ಕೆ.ಸಿ.ಟಿ ಪಾಲಿಟೆಕ್ನಿಕ್ (ಅನುದಾನಿತ), ಕಲಬುರ್ಗಿ, 2)ಟಿಪ್ಪು ಶಹೀದ ಪಾಲಿಟೆಕ್ನಿಕ್(ಅನುದಾನಿತ), ಹುಬ್ಬಳ್ಳಿ ಈ ಪಾಲಿಟೆಕ್ನಿಕ್‌ಗಳಿಗೆ 2020-21ನೇ ಸಾಲಿನಿಂದ 2023-24ನೇ ಶೈಕ್ಷಣಿಕ ಸಾಲಿನವರೆಗೆ ಮತ್ತು 3) ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್ (ಅನುದಾನಿತ), ಗದಗ್ ಈ ಪಾಲಿಟೆಕ್ನಿಕ್‌ಗೆ 2021-22ನೇ ಸಾಲಿನಿಂದ 2023-24ನೇ ಶೈಕ್ಷಣಿಕ ಸಾಲಿನವರೆಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

9/8/2024

(ಮಹಾಂತಪ್ಪ ಎಸ್.ತುರಕನೂರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ)

**ಇವರಿಗೆ:**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಪ್ರಾಂಶುಪಾಲರು, ಕೆ.ಸಿ.ಟಿ ಪಾಲಿಟೆಕ್ನಿಕ್ (ಅನುದಾನಿತ), ಕಲಬುರ್ಗಿ – 585 104.
4. ಪ್ರಾಂಶುಪಾಲರು, ಟಿಪ್ಪು ಶಹೀದ ಪಾಲಿಟೆಕ್ನಿಕ್ (ಅನುದಾನಿತ), ಹುಬ್ಬಳ್ಳಿ – 580024.
5. ಪ್ರಾಂಶುಪಾಲರು, ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್ (ಅನುದಾನಿತ), ಗದಗ್ – 582 103.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಟಿಇ 42 ಡಿವಿಪಿ(2) 2023

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:30-08-2024.

:ಹಿಂಬರಹ:

ಸರ್ಕಾರಿ ಆದೇಶ ಸಂಖ್ಯೆ: ಇಡಿ 100 ಟಿಪಿಇ 2023, ಬೆಂಗಳೂರು, ದಿನಾಂಕ: 09/08/2024 ರ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಗೆ,

1. ಪ್ರಾಂಶುಪಾಲರು, ಕೆ.ಸಿ.ಟಿ ಪಾಲಿಟೆಕ್ನಿಕ್, ಕಲಬುರ್ಗಿ-585104.
2. ಪ್ರಾಂಶುಪಾಲರು, ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್, ಗದಗ್-582103.
3. ಪ್ರಾಂಶುಪಾಲರು, ಟಿಪ್ಪು ಶಾಹೀದ್ ಪಾಲಿಟೆಕ್ನಿಕ್, ಹುಬ್ಬಳ್ಳಿ-580024.

ಪ್ರತಿ: 1. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಸಿಡಿಸಿ]
2. ಸಹಾಯಕ ನಿರ್ದೇಶಕರು [ಎಂಪಿಸಿ]
3. ಉಪ ನಿರ್ದೇಶಕರು [ಸಾಂಖ್ಯಿಕ ವಿಭಾಗ]
4. ಆಯುಕ್ತರ ಆಪ್ತ ಶಾಖೆಗೆ.
5. ನಿರ್ದೇಶಕರ ಆಪ್ತ ಶಾಖೆಗೆ.
6. ರಿಜಿಸ್ಟ್ರಾರ್(ಸಿಬ್ಬಂದಿ ವಿಭಾಗ)
8. ಸರ್ಕಾರಿ ಆದೇಶಗಳ ಕಡತಕ್ಕೆ/ಕಛೇರಿ ಪ್ರತಿಗಳು.
9. ಇ-ಗೌರನೆನ್ಸ್ ಸೆಲ್- DTE Website ನಲ್ಲಿ ಪ್ರಚುರ ಪಡಿಸಲು.